ಶ್ರೀ ದಿನೇಶ್ ಕುಂಡೂರಾವ್ ಆಯಿತು

ವಿಷಯ (ಉ) ಮರಗಳನ್ನು ಕಡಿಯಲು ಅಮುಮತಿಗಾಗಿ ಕಂದಾಯ ಇಲಾಖೆಯವರು ನೀಡುವ Workship Certificate ಬಗ್ಗೆ

ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ರೈತರು ತಂತಮ್ಮ ಜಮೀನಿನಲ್ಲಿ ಮರಮುಟ್ಟು ಬೆಳೆದಿರುತ್ತಾರೆ ಕೆಲವರು ಅಕೇಶಿಯಾ ಹಾಗೂ ಮರಮುಟ್ಟು ಬೆಳೆಸಿರುತ್ತಾರೆ ಅದರ cutting permissionಗೆ ಗೆ Forest Department ಹೋಗಬೇಕು ಆದರೆ, Forest Department ನವರು cutting ಗೆ permission ಕೊಡುವುದಕ್ಕೆ Revenue Department ನವರು Ownership Certificate ಕೊಡಬೇಕು ನಮ್ಮ ಜಇಲ್ಲಾಧಿಕಾರಿಗಳು Ownership Certificate ಕೊಡಬಾರದೆಂದು ಎಲ್ಲರಿಗೂ ಆದೇಶ ಮಾಡಿದ್ದಾರಂತೆ Cutting permission ಕೊಡುವುದು ಬಿಡುವುದು Foiest Department ಆದರೆ Owner ಹೌದೋ ಅಲ್ಲವೋ ಎಂದು ಇವರು certificate ಕೊಡದೇ ಇರುವಂಧದ್ದು ತಪ್ಪಾಗುತ್ತದೆ ಅದಕ್ಕೋಸ್ಕರ, ಮಾನ್ಯ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತೇನೆ ತಾವು ಆದೇಶ ಮಾಡಿಸಬೇಕು Ownership Certificate ಕೊಡಲಿ, ಉಳಿದಿದ್ದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಏನು ವಿಷಯ ಪ್ರಸ್ತಾಪಿಸಿದ್ದಾರೆ, ಅದರಲ್ಲಿ ಉಡುಪಿ ಜಿಲ್ಲೆಯಲ್ಲಿ ಖಾಸಗಿ ಜಮೀನಿನಲ್ಲಿರುವ ಮರ–ಮುಟ್ಟುಗಳ ಒಡೆತನದ ಬಗ್ಗೆ ಮಾಲೀಕರುಗಳಿಎ ಕಂದಾಯ ಇಲಾಖೆಯವರು Non Objection Certificate ಕೊಡುವ ಬಗ್ಗೆ ನನಗನಿಸುವ ಮಟ್ಟಿಗೆ ಇದಕ್ಕೇನೂ ತೊಂದರೆಯಿಲ್ಲ ಏಕೆಂದರೆ,

ಅವರುಗಳಿಗೆ ಮಾಲೀಕತ್ವದ ಹಕ್ಕು ಇದ್ದಾಗ ಅವರು ಮಾಲೀಕರು ಎಂಬುದನ್ನು ಹೇಳುವುದಕ್ಕೆ ಬಹುಶಃ ಅದನ್ನು Forest Departmentನವರೇ ಅವರ ಕಡೆಯಿಂದ ಮಾಲೀಕತ್ವದ ಹಕ್ಕಿನ ಬಗ್ಗೆ verify ಮಾಡಕೊಡಬಹುದಾಗಿತ್ತು ಕಂದಾಯ ಇಲಾಖೆಯಿಂದ verify ಮಾಡಿಸಿಕೊಂಡು Non Objection Certificate ತೆಗೆದುಕೊಂಡು ಬರಬೇಕೆಂದು ಹೇಳುವಂಥಾದ್ದು ಮತ್ತು ಜಿಲ್ಲಾಧಿಕಾರಿಗಳು ಅದನ್ನು deny ಮಾಡುತ್ತಿದ್ದಾರೆಂದು ಹೇಳುತತಿದ್ದಾರೆ ಹಾಗಾದರೆ, ಜಿಲ್ಲಾಧಿಕಾರಿಗಳೂ ನಾವು ಸೂಚನೆ ಕೊಡುತ್ತೇವೆ ಆ ರೀತಿ NOC ಕೊಡಬೇಕೆಂಬ ಸೂಚನೆಯನ್ನು ನಾವು ಕೊಡುತ್ತೇವೆ